# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

## ಮಾದರಿ ಪ್ರಶ್ನೆ ಪತ್ರಿಕೆ: 2018–19

## ವಿಷಯ: ಸಮಾಜಶಾಸ್ತ್ರ

**ಪ್ರಶ್ನೆಗಳ ಸಂಖ್ಯೆ: 57** — **ವಿಷಯ ಸಂಕೇತ: 95K**

**ಸಮಯ: 3 ಗಂಟೆ** — **ಅಂಕಗಳು: 100**

---

**I** ನಾಲ್ಕು ಪರ್ಯಾಯಗಳನ್ನು ಪ್ರತಿ ಹೇಳಿಕೆಗಳು ಅಥವಾ ಅಪೂರ್ಣ ವಾಕ್ಯಗಳಿಗೆ ನೀಡಲಾಗಿದೆ. ಅವುಗಳಲ್ಲಿ ಒಂದು ಸರಿಯಾದ ಉತ್ತರವಾಗಿದೆ. ಆ ಉತ್ತರವನ್ನು ಆರಿಸಿ ನಿಮ್ಮ ಉತ್ತರ ಪತ್ರಿಕೆಗಳಲ್ಲಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. **10x1=10**

1. ಕಾರ್ಲ್ ಮಾರ್ಕ್‌ನ ಸಿದ್ಧಾಂತದಿಂದ ಹೆಚ್ಚು ಪ್ರಭಾವಿತರಾದವರು

| | | | | | | | |
|---|---|---|---|---|---|---|---|
| ಎ) | ಅಮೇರಿಕನ್ನರು | ಬಿ) | ರಷ್ಯನ್ನರು | ಸಿ) | ಫ್ರೆಂಚರು | ಡಿ) | ಡಚ್ಚರು |

2. ಆಹಾರ ಮತ್ತು ಉಡುಪು ಪದ್ಧತಿಗಳಲ್ಲಾಗುವ ಬದಲಾವಣೆಗಳು ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

| | | | |
|---|---|---|---|
| ಎ) | ನಿಯೋಜಿತ ಬದಲಾವಣೆಗೆ | ಸಿ) | ಪುನರಾವರ್ತಿತ ಬದಲಾವಣೆಗೆ |
| ಬಿ) | ಅನಿಯೋಜಿತ ಬದಲಾವಣೆಗೆ | ಡಿ) | ಧೀರ್ಘಾವಧಿಯ ಬದಲಾವಣೆಗೆ |

3. ಭಾರತ ಸರ್ಕಾರ ಜನಸಂಖ್ಯೆಯನ್ನು ನಿಯಂತ್ರಿಸಲು ಜಾರಿಗೆ ತಂದ ಯೋಜನೆ –

| | | | |
|---|---|---|---|
| ಎ) | ಇಂದಿರಾ ಆವಾಸ ಯೋಜನೆ | ಸಿ) | ಕುಟುಂಬ ಕಲ್ಯಾಣ ಕಾರ್ಯಕ್ರಮ |
| ಬಿ) | ಕುಟುಂಬ ಸಮತೋಲನ ಯೋಜನೆ | ಡಿ) | ಕುಟುಂಬ ಯೋಜನೆ |

4. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಪುಸ್ತಕ ಬರೆದವರು –

| | | | |
|---|---|---|---|
| ಎ) | ಗಾಂಧೀಜಿಯವರು | ಸಿ) | ಜಿ.ಎಸ್.ಗುರ್ರೆರವರು |
| ಬಿ) | ಡಾ. ಬಿ.ಆರ್.ಅಂಬೇಡ್ಕರ್ ರವರು | ಡಿ) | ಲಾಲ್ ಬಹದ್ದೂರ್ ಶಾಸ್ತ್ರಿರವರು |

5. ದಯಾನಂದ ಸರಸ್ವತಿರವರು ನೀಡಿದ ಕರೆ

| | | | |
|---|---|---|---|
| ಎ) | ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು | ಸಿ) | ಮಾಡು ಇಲ್ಲವೆ ಮಡಿ |
| ಬಿ) | ವೇದಗಳಿಗೆ ಹಿಂದಿರುಗಿ | ಡಿ) | ಆಂಗ್ಲರೆ ಭಾರತ ಬಿಟ್ಟು ತೊಲಗಿ |

6. ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯವನ್ನು ಆರಂಭಿಸಿದವರು.

ಎ) ಎಂ.ಜಿ. ರಾನಡೆರವರು    ಸಿ) ಈಶ್ವರಚಂದ್ರ ವಿದ್ಯಾಸಾಗರ್ ರವರು

ಬಿ) ಮಹರ್ಷಿ ಕರ್ವೆರವರು    ಡಿ) ಗೋಪಾಲಕೃಷ್ಣ ಗೋಖಲೆರವರು

7. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಮಹಿಳಾ ಅಧ್ಯಕ್ಷೆ

ಎ) ಆ್ಯನಿಬೆಸೆಂಟ್‌ರವರು    ಸಿ) ವಿಜಯಲಕ್ಷ್ಮಿ ಪಂಡಿತರು

ಬಿ) ಇಂದಿರಾಗಾಂಧಿಯವರು    ಡಿ) ಸರೋಜಿನಿ ನಾಯ್ಡುರವರು

8. ದಿ ಬೈಗಾ ಮತ್ತು ದಿ ಅಬಾರಿಜಿನಲ್ಸ್ ಎಂಬ ಪುಸ್ತಕಗಳನ್ನು ಪ್ರಕಟಿಸಿದವರು

ಎ) ಎಸ್.ಎಫ್.ನಡಾಲ್ ರವರು    ಸಿ) ಜಿ.ಎಸ್. ಗುರ್ರೆರವರು

ಬಿ) ಬೋರ್ಗಾಡಸ್ ರವರು    ಡಿ) ವೆರಿಯರ್ ಎಲ್ವಿನರವರು

**ಪು.ತಿ.ನೋ**

9. ಬುಡಕಟ್ಟು ಜನರನ್ನು ಹಿಂದುಳಿದ ಹಿಮದುಗಳು ಎಂದು ಕರೆದವರು –

ಎ) ಡಾ॥ ಬಿ.ಆರ್. ಅಂಬೇಡ್ಕರ್‌ರವರು ಸಿ) ಜಿ.ಎಸ್. ಗುರ್ರೆರವರು

ಬಿ) ಗಾಂಧೀಜಿಯವರು ಡಿ) ಬೋರ್ಗಾಡಸ್‌ರವರು

10. 1962 ಭಾರತ ಚೀನಾ ಯುದ್ಧದ ಸಮಾಚಾರಗಳನ್ನು ತಿಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು

ಎ) ಕರಪತ್ರಗಳು ಬಿ) ವೃತ್ತಪತ್ರಿಕೆ ಸಿ) ಟೆಲಿವಿಷನ್ ಡಿ) ರೇಡಿಯೋ

**II 11. 'ಅ' ಪಟ್ಟಿಯನ್ನು 'ಈ' ಪಟ್ಟಿಯೊಂದಿಗೆ ಹೊಂದಿಸಿ ಉತ್ತರಗಳನ್ನು ಬರೆಯಿರಿ: 1x5=5**

| 'ಅ' ಪಟ್ಟಿ | 'ಈ' ಪಟ್ಟಿ |
|---|---|
| a) ಆರ್ಯ ಸಮಾಜ | i) ಕರಮ ಚಂದ್ರ ಗಾಂಧಿ |
| b) ಬ್ರಹ್ಮ ಸಮಾಜ | ii) ಜ್ಯೋತಿ ರಾವ್ ಫುಲೆ |
| c) ಬರ್ದೋಲಿ ಸತ್ಯಾಗ್ರಹ | iii) ಆತ್ಮಾರಾಂ ಪಾಂಡುರಂಗ |
| d) ಚಂಪಾರಣ್ಯ ಸತ್ಯಾಗ್ರಹ | iv) ದಯಾನಂದ ಸರಸ್ವತಿ |
| e) ಪ್ರಾರ್ಥನ ಸಮಾಜ | v) ಎಂ.ಕೆ. ಗಾಂಧಿ |
| | vi) ಸರದಾರ್ ಪಟೇಲ್ |
| | vii) ರಾಜಾರಾಮ್ ಮೋಹನ್ ರಾಯ್ |

**III ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 15x1=15**

12. ಕೈಗಾರಿಕೀಕಣ ಎಂದರೇನು?
13. ಸಾಮಾಜಿಕ ಬದಲಾವಣೆ ಎಂದರೇನು?
14. ನಗದೀಕರಣಕ್ಕೆ ಪ್ರಚೋದನೆ ನೀಡುವ ಅಂಶಗಳೇನು?
15. ವಲಸೆಯ ಹೆಚ್ಚಳಕ್ಕೆ ಕಾರಣವಾಗುವ ಅಂಶ ಯಾವುದು?
16. ಪಕ್ಕಾ ಮತ್ತು ಕಚ್ಚಾ ಆಹಾರಕ್ಕಿರುವ ವ್ಯತ್ಯಾಸವೇನು?
17. ಕರ್ನಾಟಕದಲ್ಲಿ ರಾಜಕೀಯ ಮೀಸಲಾತಿಯನ್ನು ಮೊದಲು ಜಾರಿಗೆ ತಂದವರಾರು?
18. ಸತಿ ಪದ್ಧತಿ ಎಂದರೇನು?
19. ಭಾರತದ ಮೊದಲ ಶಿಕ್ಷಕಿ ಯಾರು?
20. ಭಾರತದ ಮೊದಲ ಮಹಿಳಾ ರಾಷ್ಟ್ರಾಧ್ಯಕ್ಷರು ಯಾರು?
21. ಮಧ್ಯಯುಗೀನ ಭಾರತದ ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನ ಇಳಿಮುಖವಾಯಿತು. ಏಕೆ?
22. ಗಿಡಮೂಲಿಕೆಯ ಔಷಧಿಗಳ ತಯಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ಯಾರು?
23. ಗಾಂಧೀಜಿಯವರು ಆದಿವಾಸಿಗಳನ್ನು ಏನೆಂದು ಕರೆದರು?
24. ಬ್ಲಾಕ್ ಪದ್ಧತಿ ಎಂದರೇನು?
25. ಬೆಂಗಳೂರನ್ನು ಸಿಲಿಕಾನ್ ಸಿಟಿ ಎಂದು ಏಕೆ ಕರೆಯಲಾಗಿದೆ.
26. ವಯಸ್ಕರ ಶಿಕ್ಷಣ ಎಂದರೇನು?

**IV ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 24x2=48**

27. ನಿಯೋಜಿತ ಮತ್ತು ಅನಿಯೋಜಿತ ಸಾಮಾಜಿಕ ಬದಲಾವಣೆಗಳಿಗಿರುವ ವ್ಯತ್ಯಾಸಗಳೇನು?
28. ಜಗತ್ತನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಪ್ರಮುಖ ಸಾಧನಗಳಾವುವು?
29. ಅನಕ್ಷರತೆಯು ಸಾಮಾಜಿಕ ಬದಲಾವಣೆಯನ್ನು ಮಂದಗತಿಗೊಳಿಸುತ್ತದೆ. ಹೇಗೆ?
30. ಪ್ರಾದೇಶಿಕ ಅಸಮತೋಲನದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
31. ಜಾತಿ ಪದದ ಜಗಮ ಮತ್ತು ಅರ್ಥವನ್ನು ವಿವರಿಸಿ.
32. ಹೋಟೆಲ್ ಉದ್ಯಮದ ಮೇಲೆ ಜಾತಿಯ ಪ್ರಭಾವ ಬದಲಾಗಿದೆ. ಹೇಗೆ? ವಿವರಿಸಿ.
33. ಸಾಮಾಜಿಕ ಚಳುವಳಿಯ ಉದ್ದೇಶಗಳೇನು?
34. ದಂಗೆ ಅಥವಾ ಬಂಡವಾಳಗಳು ಸ್ವರೂಪದಲ್ಲಿ ಸತ್ಯಾಗ್ರಹಕ್ಕಿಂತ ಭಿನ್ನವಾದವು. ಹೇಗೆ?
35. ಮಹಿಳಾ ಸಬಲೀಕರಣವನ್ನು ಜಾರಿಗೆ ತರಲಾಗಿದೆ. ಏಕೆ?
36. ಹಂಟರ್ ಶಿಕ್ಷಣ ಆಯೋಗದಲ್ಲಿ ಮಹಿಳಾ ಶಿಕ್ಷಣಕ್ಕೆ ನೀಡಿರುವ ಪ್ರಮುಖ್ಯತೆಯನ್ನು ವಿವರಿಸಿ.

37. ಭಾರತದ ಬುಡಕಟ್ಟುಗಳಲ್ಲಿ ಸಂಭಾವಿಸುತ್ತಿರುವ ಸಾಮಾಜಿಕ ಬದಲಾವಣೆಯನ್ನು ವಿವರಿಸಿ.
38. ಭಾರತದಲ್ಲಿನ ಬುಡಕಟ್ಟುಗಳ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ.
39. ಸಮೂಹ ಮಾಧ್ಯಮಗಳ ಪ್ರಕಾರಗಳನ್ನು ಹೆಸರಿಸಿ. ಉದಾಹರಣೆ ನೀಡಿ.
40. ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯುಕ್ತತೆಯನ್ನು ತಿಳಿಸಿ.
41. ಕೈಗಾರಿಕೀಕರಣದಿಂದ ಸಮಾಜಿಕ ಬದಲಾವಣೆ ಹೇಗುಂಟಾಗುತ್ತದೆ?
42. 1854ರ ವಿಶೇಷ ವಿವಾಹ ಕಾಯ್ದೆಯ ಪ್ರಮುಖ ಅಂಶಗಳೇನು?
43. 1856ರ ಹಿಂದೂ ಪುನರ್ ವಿವಾಹ ಕಾಯ್ದೆಯ ಪ್ರಮುಖ ಅಂಶಗಳನ್ನು ತಿಳಿಸಿ.
44. ಬ್ರಹ್ಮ ಸಮಾಜದ ಸ್ಥಾಪನೆ ಬಗ್ಗೆ ರಾಜಾರಾಮ್ ಮೋಹನ್ ರಾಯ್‌ರವರು ಏನು ಸ್ಪಷ್ಟಗೊಳಿಸುತ್ತಾರೆ?
45. ಕಬೀರ್ ಎರಡೂ ಧರ್ಮದವರ ಕೋಪಕ್ಕೆ ತುತ್ತಾಗಬೇಕಾಗಿ ಬಂತು ಏಕೆ?
46. ಮಹಾಭಾರತದ ಕಾಲದಲ್ಲಿನ ಸ್ತ್ರೀಯರ ಸ್ಥಾನಮಾನವನ್ನು ಕುರಿತು ಬರೆಯಿರಿ.
47. ಸ್ತ್ರೀಯರ ಸ್ಥಾನಮಾನ ಉತ್ತಮಪಡಿಸಲು ಶ್ರಮಿಸಿದ ಮಹಾನ್ ವ್ಯಕ್ತಿಗಳನ್ನು ಹೆಸರಿಸಿ.
48. ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರ ಸಹಭಾಗಿತ್ವದ ಬಗ್ಗೆ ಬರೆಯಿರಿ.
49. ಮಹಿಳೆಯರ ಆಸ್ತಿ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿಳಿಸಿ.
50. ಸಾಮಾಜಿಕ ಬದಲಾವಣೆಯಲ್ಲಿ ರೇಡಿಯೋದ ಪಾತ್ರವನ್ನು ವಿವರಿಸಿ.

**V ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರರಿಂದ ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

51. ಸಾಮಾಜಿಕ ಬದಲಾವಣೆ ತರುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವನ್ನು ವಿವರಿಸಿ.
52. ಸಾಮಾಜಿಕ ಬದಲಾವಣೆಗೆ ಆರ್ಥಿಕ ಅಸಮಾನತೆ ಹೇಗೆ ಅಡ್ಡಿಯಾಗಿದೆ. ವಿವರಿಸಿ.
53. ಭಾರತದಲ್ಲಿನ ಪ್ರತಿಭಟನಾತ್ಮಕ ಚಳುವಳಿಗಳ ಲಕ್ಷಣಗಳನ್ನು ತಿಳಿಸಿ.
54. ಬರಿಟಿಷರ ಕಾಲದಲ್ಲಿ ಮಹಿಳೆಯರ ಪ್ರಗತಿಗಾಗಿ ಶ್ರಮಿಸಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.
55. ಭಾರತೀಯ ಬುಡಕಟ್ಟುಗಳ ಬದಲಾವಣೆಯಲ್ಲಿ ಭಾರತ ಸರ್ಕಾರದ ಪಾತ್ರವನ್ನು ವಿವರಿಸಿ.
56. ಜನರ ಜೀವನ ಶೈಲಿಯ ಮೇಲೆ ಚಲನಚಿತ್ರಗಳ ಪ್ರಭಾವವನ್ನು ವಿವರಿಸಿ.

**V ಈ ಪ್ರಶ್ನೆಗೆ ಉತ್ತರಿಸಿರಿ: 1x4=4**

57. 'ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳು ಜಾತಿ ಪದ್ಧತಿಯನ್ನು ಬದಲಾಯಿಸಿವೆ'. ವಿವರಿಸಿ.

*****